ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 183, ಭಾನುವಾರ, 03–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

ರಾಮ್ ರಹೀಮ್ ಟ್ವಿಟರ್ ಖಾತೆ ಸ್ಥಗಿತ

ನವದೆಹಲಿ: ಅತ್ಯಾಚಾರ ಪ್ರಕರಣದಲ್ಲಿ 20 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಗುರ್ಮೀತ್ ರಾಮ್ ರಹೀಮ್ ಸಿಂಗ್ನ ಟ್ವಿಟರ್ ಖಾತೆಯನ್ನು ಭಾರತದಲ್ಲಿ ಸ್ಥಗಿತಗೊಳಿಸಲಾಗಿದೆ. ಹರಿಯಾಣ ಪೊಲೀಸರ ಮನವಿಯ ಮೇರೆಗೆ ರಾಮ್ ರಹೀಮ್ ಟ್ವಿಟರ್ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ. ಭಾರತ ಬಿಟ್ಟು ಹೊರ ದೇಶಗಳಲ್ಲಿ ಟ್ವಿಟರ್ ಖಾತೆ ಚಾಲ್ತಿಯಲ್ಲಿರಲಿದೆ.

ದ್ವಿತೀಯ ಪಿಯುಸಿ: ಒಂದು ಭಾಷೆಯಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ

ಬೆಂಗಳೂರು:ಸೆ,2– ಪ್ರಸಕ್ತ ಶೈಕ್ಷಣಿಕ ವರ್ಷದಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕೇವಲ ಒಂದು ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಈ ಮೊದಲು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು.

2018ರ ಮಾರ್ಚ್/ ಎಪ್ರಿಲ್ ಪರೀಕ್ಷೆಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಒಂದು ಭಾಷೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಇಲಾಖೆ ನಿರ್ದೇಶನ ನೀಡಿದೆ. ಸೆಪ್ಟಂಬರ್ 30 ರೊಳಗೆ ವಿದ್ಯಾರ್ಥಿಗಳು ತಾವು ಪರೀಕ್ಷೆ ಬರೆಯುವ ಭಾಷೆಯನ್ನು ಆಯ್ಕೆ ಮಾಡಲು ಗಡುವು ನೀಡಲಾಗಿದೆ.

ಇತ್ತೀಚಿನ ಕೆಲ ವರ್ಷಗಳಲ್ಲಿ ವಿದ್ಯಾರ್ಥಿಗಳು ಕೆಲವೊಂದು ಪ್ರಶ್ನೆ ಪತ್ರಿಕೆಗಳನ್ನು ಕನ್ನಡದಲ್ಲಿ ಮತ್ತೆ ಕೆಲವು ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲೀಷ್ ನಲ್ಲಿ ಬರೆಯುತ್ತಿದ್ದರು. ಇದರಿಂದ ಮೌಲ್ಯ ಮಾಪನದ ವೇಳೆ ಗೊಂದಲ ಉಂಟಾಗುತ್ತಿತ್ತು. ಇದನ್ನು ತಪ್ಪಿಸಲು ನಾವು ಈ ನಿರ್ಧಾರ ಕೈಗೊಂಡಿದ್ದಾಗಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ತಾವು ಉತ್ತರ ಬರೆಯುವ ಭಾಷೆಯ ಆಯ್ಕೆ ಮಾಡಿದ ನಂತರ ಕಾಲೇಜುಗಳು ರವಾನಿಸಿದ ಚಿತ್ರಣದ ಆಧಾರದ ಮೇಲೆ ಪ್ರಶ್ನೆ ಪತ್ರಿಕೆ ಕಳುಹಿಸಲು ಸಿದ್ಧತೆ ನಡೆಸಲಾಗುವುದು. ತಮ್ಮ ಭಾಷೆಯ ಆಯ್ಕೆ ನಂತರ ಮಾತ್ರವೇ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು.

ಪ್ರಶ್ನೆ ಪತ್ರಿಕೆಗಳಲ್ಲಿ ಕೆಲವೊಂದು ತಾಂತ್ರಿಕ ಶಬ್ದಗಳನ್ನು ಆಂಗ್ಲ ಭಾಷೆಯಲ್ಲಿ ಬರೆಯಲು ಅವಕಾಶ ಕೊಡಲಾಗುವುದು ಎಂದು ಇಲಾಖೆ ತಿಳಿಸಿದೆ. 2017ರ ಮಾರ್ಚ್ ತಿಂಗಳಲ್ಲಿ ಸುಮಾರು 1.2 ಲಕ್ಷ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಮತ್ತು 2.55 ವಿದ್ಯಾರ್ಥಿಗಳು ಇಂಗ್ಲಿಷ್ ನಲ್ಲಿ ಪರೀಕ್ಷೆ ಬರೆದಿದ್ದರು.

800 ಎಂಜನಿಯರಿಂಗ್ ಕಾಲೇಜುಗಳಿಗೆ ಬೀಗ!

ಬೆಂಗಳೂರು:ಸೆ,2– ಮುಂದಿನ ಶೈಕ್ಷಣಿಕ ವರ್ಷದೊಳಗೆ ದೇಶಾದ್ಯಂತ ಸುಮಾರು 800 ಎಂಜಿನೀಯರಿಂಗ್ ಕಾಲೇಜುಗಳಿಗೆ ಬೀಗಮುದ್ರೆ ಜಡಿಯಲಾಗುವುದು.

ಕಳಪೆ ಗುಣಮಟ್ಟದ ಸಾಧನೆಯಿಂದಾಗಿ ಈ ಕಾಲೇಜುಗಳನ್ನು ಮುಚ್ಚಲು ಅಖಿಲಭಾರತ ತಾಂತ್ರಿಕ ಶಿಕ್ಷಣ ಮಂಡಳಿ ನಿರ್ಧರಿಸಿದ್ದು ಸೆಪ್ಟಂಬರ್ 2ನೇ ವಾರದೊಳಗೆ ವರದಿ ಸಲ್ಲಿಸುವಂತೆ ಈ ಕಾಲೇಜುಗಳಿಗೆ ಸೂಚಿಸಲಾಗಿದೆ.

ಈ ಕಾಲೇಜುಗಳಲ್ಲಿ ಕಳೆದ 5 ವರ್ಷಗಳಿಂದ ಶೇ.30 ಕ್ಕಿಂತ ಕಡಿಮೆ ದಾಖಲಾತಿಯಿರುವ ಕಾರಣ ಮುಚ್ಚಲು ಹೇಳಲಾಗಿದೆ. ಜೊತೆಗೆ ಪಕ್ಕದಲ್ಲಿರುವ ಕಾಲೇಜುಗಳ ಜೊತೆ ವಿಲೀನಗೊಳ್ಳುವ ಅವಕಾಶ ಕೂಡ ನೀಡಿದ್ದೇವೆ ಎಂದು ಅನಿಲ್ ಸಹಸ್ರಬುದೆ ಹೇಳಿದ್ದಾರೆ.

ಕರ್ನಾಟಕದಲ್ಲಿ 600 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಅದರಲ್ಲಿ ಕಳಪೆ ಗುಣಮಟ್ಟದ ಸಾಧನೆ ಮಾಡಿರುವ ಎಂಜಿನೀಯರ್ಯು ಕಾಲೇಜುಗಳ ಪಟ್ಟಿ ಮಾಡಿದ್ದು, ಅದನ್ನು ಸಾರ್ವಜನಕವಾಗಿ ಬಹಿರಂಗ ಪಡಿಸಿಲ್ಲ.ಪಟ್ಟಿ ಮಾಡಿರುವ ಕಾಲೇಜು ಗಳಿಗೆ ಕ್ಲೋಸ್ ಮಾಡುತ್ತೀರೋ ಅಥವಾ ಪಕ್ಕದಲ್ಲಿರುವ ಕಾಲೇಜುಗಳ ಜೊತೆ ವಿಲೀನವಾಗುತ್ತೀರೋ ಎಂಬ ಬಗ್ಗೆ ವರದಿ ಸಲ್ಲಿಸಲು ತಿಳಿಸಲಾಗಿದೆ. ಈ ಬದಲಾವಣೆ 2018–19ರ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ. ದೇಶದಲ್ಲಿ ಒಟ್ಟು 10,361 ಎಂಜಿನೀಯರಿಂಗ್ ಕಾಲೇಜುಗಳಿವೆ, ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೇ 1,500, ತಮಿಳುನಾಡಿನಲ್ಲಿ 1,300, ಉತ್ತರ ಪ್ರದೇಶದಲ್ಲಿ 1,165 ಮತ್ತು ಆಂಧ್ರ ಪ್ರದೇಶದಲ್ಲಿ 800 ಕಾಲೇಜುಗಳಿದ್ದು, 37 ಲಕ್ಷ ಸೀಟುಗಳಲ್ಲಿ 27 ಲಕ್ಷ ಸೀಟುಗಳು ಇಂದಿಗೂ ಖಾಲಿಯಿವೆ.

ಭಾರತಕ್ಕೆ ಅಮೆರಿಕ ರಾಯಭಾರಿ ಕೆನತ್ ಜಸ್ಟರ್



ವಾಷಿಂಗ್ಟನ್:ಸೆ,2– ಭಾರತದಲ್ಲಿನ ಅಮೆರಿಕ ರಾಯಭಾರಿಯನ್ನಾಗಿ ಅರ್ಥಿಕ ತಜ್ಞ ಕೆನತ್ ಜಸ್ಟರ್(62) ಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೇಮಕ ಮಾಡಿದ್ದಾರೆ. ಇದನ್ನು ಶ್ವೇತಭವನ ಅಧಿಕೃತವಾಗಿ ಪ್ರಕಟಿಸಿದೆ.

ಸದ್ಯ ಟ್ರಂಪ್ ಅವರ ಅಂತರ ರಾಷ್ಟ್ರೀಯ ಆರ್ಥಿಕ ವ್ಯವಹಾರಗಳ ಸಲಹೆಗಾರ ಮತ್ತು ರಾಷ್ಟ್ರೀಯ ಆರ್ಥಿಕ ಆಯೋಗದ ಉಪ ನಿರ್ದೇಶಕರಾಗಿರುವ ಜಸ್ಟ್ರ, ರಿಚರ್ಡ್ ವರ್ಮಾ ಅವರಿಂದ ತೆರವಾಗಿರುವ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ.ಜಸ್ಟರ್ ಅವರು 2001–05ರವರೆಗೆ ಹಣಕಾಸು ಕಾರ್ಯಾಲಯದಲ್ಲಿ, 1989 ರಿಂದ 1993ರವರೆಗೆ ರಾಯಭಾರ ಕಚೇರಿಯ ಹಿರಿಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.ಹಾರ್ವರ್ಡ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ವ್ಯವಹಾರಗಳ ವಿಭಾಗದ ಮುಖ್ಯಸ್ಥರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ.

ಬಿಜೆಪಿ ಬೈಕ್ ರ್ಯಾಲಿ ತಡೆವೊಡ್ಡಲು ರೆಡ್ಡಿಗೆ ಸಿಎಂ ಸೂಚನೆ!

ಬೆಂಗಳೂರು: ಮಂಗಳೂರಿನಲ್ಲಿ ಪರಿಸ್ಥಿತಿ ಶಾಂತವಾಗಿದೆ. ಆದ್ರೆ ಬಿಜೆಪಿ ಬೈಕ್ ರ್ಯಾಲಿ, ಸಮಾವೇಶದಿಂದ ಮತ್ತೆ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ ಎಂಬ ಕಾರಣ ನೀಡಿ ರ್ಯಾಲಿಗೆ ತಡೆವೊಡ್ಡಲು ಸಿಎಂ ನಿರ್ಧರಿಸಿದ್ದಾರೆ.ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ರಾಮಲಿಂಗರೆಡ್ಡಿಗೆ ಇದರ ಜವಾಬ್ದಾರಿ ವಹಿಸಿರುವ ಸಿಎಂ, ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ. ರ್ಯಾಲಿ ಮಂಗಳೂರು ತಲುಪದಂತೆ ತಡೆಯುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.ಸೆ.5ರಂದು ಬೆಂಗಳೂರಿನಿಂದ ಹೊರಡುವ ರ್ಯಾಲಿ ಸೆ.7ರಂದು ಮಂಗಳೂರು ತಲುಪಿ ಸಮಾವೇಶ ಹಮ್ಮಿಕೊಳ್ಳಲು ಬಿಜೆಪಿ ನಿರ್ಧರಿಸಿದೆ. ರಾಜ್ಯದ ವಿವಿಧ ಭಾಗದಿಂದ ರ್ಯಾಲಿ ಹೊರಡುವ ಒಟ್ಟು 5 ಸಾವಿರ ಬೈಕ್ ಸವಾರರು ಸೆ.7ರಂದು ಮಂಗಳೂರನ್ನು ತಲುಪಲಿದ್ದಾರೆ. ಸಾವಿರಾರು ಮಂದಿ ಸೇರಿಸಿ ಮಂಗಳೂರಿನಲ್ಲಿ ಸಮಾವೇಶ ಕೈಗೊಳ್ಳಲು ಬಿಜೆಪಿ ಯುವ ಮೋರ್ಚಾ ನಿರ್ಧರಿಸಿದೆ.

ಸೆ. 6 ರಂದು ಯಜುರ್ ಉಪಾಕರ್ಮ

ಹಾಸನ, ಸೆ, 2–ಇಲ್ಲಿನ ಶ್ರೀ ಶೃಂಗೇರಿ ಶಂಕರಮಠದ ಕಲ್ಯಾಣ ಮಂಟಪದಲ್ಲಿ ಸೆ. 6ರ ಬುಧವಾರ ಬೆಳಗ್ಗೆ 8 ಗಂಟೆಗೆ ಯಜುರ್ ಉಪಾಕರ್ಮವನ್ನು ಆಯೋಜಿಸಲಾಗಿದೆ ಎಂದು ನಗರ ಬ್ರಾಹ್ಮಣ ಮಹಾಸಭಾ ಆಧ್ಯಕ್ಷ ಡಿ.ಹೆಚ್.ಚಂದ್ರಶೇಖರ್ ಮತ್ತು ಕಾರ್ಯದರ್ಶಿ ಅನಂತರಾಮು ತಿಳಿಸಿದ್ದಾರೆ. ಯಜುರ್ವೇದಿಗಳು ಸಕಾಲಕ್ಕೆ ಅಗಮಿಸಿ ಈ ಅವಕಾಶವನ್ನು ಬಳಿಸಿಕೊಳ್ಳುವಂತೆ ಆವರು ಪ್ರಕಣೆಯಲ್ಲಿ ಕೋರಿದ್ದಾರೆ.

ಹೊಳೆನರಸೀಪುರ :ಪಟ್ಟಣದ ಮುಸ್ಲೀಂ ಭಾಂದವರು ಬಕ್ರೀದ್ ಹಬ್ಬದ ಪ್ರಯುಕ್ತ ಹೊಳೆನರಸೀಪುರ ಅರಕಲಗೂಡು ರಸ್ತೆಯಲ್ಲಿರುವ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಸಡಗರ ಸಂಭ್ರಮದಿಂದ ಆಚರಿಸಿದರು.

ಬೇಲೂರಿನಲ್ಲಿ ಬಕ್ರಿದ್ ಹಬ್ಬದ ಅಂಗವಾಗಿ ಮುಸ್ಲೀಮರು ಮೆರವಣಿಗೆ ಮೂಲಕ ಗೆಂಡೇಹಳ್ಳಿ ರಸ್ತೆಯ ಈದ್ಗಾ ಮೈದಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ನುಗ್ಗೇಹಳ್ಳಿ: ಇಲ್ಲಿಯ ಬಾಗೂರು ರಸ್ತೆ ಈದ್ಗಾ ಮೈಧಾನದಲ್ಲಿ ಮುಸ್ಲೀಂ ಬಾಂದವರು ಈದ್‌ಜ್ವಹ ಪ್ರಾರ್ಥನೆ ಸಲ್ಲಿಸಿ ಬಕ್ರೀದ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.ಈ ಸಂದರ್ಭದಲ್ಲಿ ಜುಮ್ಮಾ ಮಸೀದಿ ಅಧ್ಯಕ್ಷ ಜಾವೇದ್, ಕಾರ್ಯದರ್ಶಿ ಸಾದಿಕ್‌ಪಾಷ, ತಾಲೋಕು ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಶಮಿಉಲ್ಲಾ, ಎಮ್.ಡಿ. ಜಕ್ರಿಯ, ಮಹಮದ್ ರಫಿ, ಅನ್ವರ್ ಪಾಷ, ವಾಜಿದ್, ಜಪ್ರು, ಇಲಿಯಾಸ್ ಸೇರಿದಂತೆ ನೂರಾರು ಮುಸ್ಲೀಂ ಬಾಂಧವರು ಹಾಜರಿದ್ದರು.

ಇತ್ತೀಚಿಗೆನಡೆದ 'ಐಡಿಯಲ್ ಪ್ಲೇ ಅಬಾ ಕಾಸ್' ಅಂತರ್ ಜಿಲ್ಲೆಯ ಸ್ಪರ್ಧೆಯಲ್ಲಿ ನಗರದ ಎಸ್.ಜಿ.ಆರ್. ಅಬಾಕಾಸ್ ಹಾಗೂ ಟ್ರೈವಸ್ ಅಬಾಕಾಸ್ ಕೇಂದ್ರದ ವಿದ್ಯಾರ್ಥಿಗಳು ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಪಡೆಯುವುದರ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಸಂಸ್ಥೆಯ ಮುಖ್ಯಸ್ಥರು, ಶಿಕ್ಷಕರು ಮತ್ತು ಪೋಷಕರುಗಳು ಅವರನ್ನು ಅಭಿನಂದಿಸಿದ್ದಾರೆ.

ಸೆ.5 ರಂದು ಕ್ರೈಸ್ತ ವೇದಿಕೆಯಿಂದ ಸುವಾರ್ತಾ ಮಹೋತ್ಸವ

ಹಾಸನ; ಸೆಪ್ಟೆಂಬರ್ 5 ರಿಂದ 7ರವರೆಗೆ ಮೂರು ದಿನಗಳ ಕಾಲ ನಗರದ ನಗರಸಭಾ ವಸ್ತು ಪ್ರದರ್ಶನದ ಆವರಣದಲ್ಲಿ ಕರ್ನಾಟಕ ಕ್ರೈಸ್ತಜನಪರ ವೇದಿಕೆವತಿಯಿಂದ ಸುವಾರ್ತಾ ಮಹೋತ್ಸವ–2017 ನ್ನುಆಯೋಜಿಸಲಾಗಿದೆ ಎಂದು ವೇದಿಕೆಯಜಿಲ್ಲಾಧ್ಯಕ್ಷಜಿ.ಎಸ್.ಥಾಮಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುವಾರ್ತಾ ಮಹೋತ್ಸವದಲ್ಲಿ ವಿಶೇಷ ಸಂದೇಶಕರಾಗಿ ಸಹೋದರ ದೀವನಯ್ಯ ಹೋಲಿ ಮಿನಿಸ್ಟ್ರೀಸ್ ಗುಂಟೂರು ಆಂಧ್ರಪ್ರದೇಶ ಇವರುಆಗಮಿಸಲಿದ್ದು,ಕಾರ್ಯಕ್ರಮದಲ್ಲಿ ಹಾಸನ ಜಿಲ್ಲಾ ಮಹಿಳಾ ಕ್ರೈಸ್ತ ಒಕ್ಕೂಟದ ಅದ್ಯಕ್ಷರಾದ ಸಹೋದರಿ ಬಿಂದುಚಂದನ್ ರವರು, ಬೆಂಗಳೂರಿನ ಗಿರೀಶ್ ನಾಯ್ಕ್ ಹಾಗು ಸಹೋದರ ಕಾಳಾನಾಯ್ಕ್‌ರವರು ಆರಾಧನೆ ನಡೆಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು, ಶಾಸಕರಾದ ಹೆಚ್.ಡಿ. ರೇವಣ್ಣನವರು, ಶಾಸಕ ಪ್ರಕಾಶ್ ಮತ್ತು ಕುಮಾರಸ್ವಾಮಿ, ನಗರ ಸಭಾಧ್ಯಕ್ಷ ಅನಿಲ್‌ಕುಮಾರ್, ಕೆಪಿಸಿಸಿ ಉಪಾಧ್ಯಕ್ಷರಾದ ಡಾ.ಹೆಚ್.ಟಿ. ಸಾಂಗ್ಲಿಯಾ ಉಸ್ತುವಾರಿ ಸಚಿವರಾದ ಎ.ಮಂಜು ಜಿ.ಪಂ.ಅಧ್ಯಕ್ಷರಾದ ಶ್ವೇತಾದೇವ 'ರಾಜ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.ಕ್ರೈಸ್ತ ಬಂಧುಗಳು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಪ್ರಾಥನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆದು ಕೇಳಿಕೊಂಡರು.

ಗೋಷ್ಠಿಯಲ್ಲಿ ಕರ್ನಾಟಕ ಕ್ರೈಸ್ತಜನಪರ ವೇದಿಕೆಯು ರಾಜ್ಯಾಧ್ಯಕ್ಷರಾದ ಕೆ.ವಿ.ಮಣಿ, ರಾಜ್ಯ ಪ್ರಧಾನ ಕಾರ್ಯ ದರ್ಶಿಗಳಾದ ಸಜೀತ್, ವೆಂಕಟ ರಾಮು ಹಾಗು ಸಹೋದರ ವಿಜಯ್‌ಕುಮಾರ್ ಹೆಚ್.ಎಮ್. ಉಪಸ್ಥಿತರಿದ್ದರು.

ಸೆ. 5 ರಿಂದ ಮಂಗಳೂರು ಚಲೋ ಬೈಕ್ ರ್ಯಾಲಿ

ಹಾಸನ: ದೇಶದ್ರೋಹಿ
ಸಂಘಟನೆಗಳು ನಡೆಸಲಾ ಗುತಿ
ರುವ ಹಿಂದೂ ಕ
ಹತ್ಯೆ ಖಂಡಿಸಿ
ಮೋರ್ಚಾದಿಂದ
ರಿಂದ 7ರ ವರೆಗೂ
ಚಲೋ ಬೃಹತ್
ಹಮ್ಮಿಕೊಂಡಿರು
ಯುವ ಮೋ
ಪ್ರಧಾನ ಕಾ
ತಮ್ಮೇಶ್‌ಗೌಡ ತಿ
ಪತ್ರಿಕಾಗೋ
ಮಾತನಾಡಿ ಅವ
ಕೆ.ಎಫ್.ಡಿ. ಮತ್ತು
ಸಂಘಟನೆಗಳನ್ನು
ಹಾಗೂ ರಾ
ಸಂಘಟನೆಗಳ
ಗುತ್ತಿರುವ ಹಿಂ
ಕರ್ತರ ಹತ್ಯೆ ಖಂ
5 ರಂದು ಬೆಂಗ
ಶಿವಮೊಗ್ಗ, ಚಿ
ಹಾಗೂ ಮೈಸೂ

[redacted]

ರು 50 ಸಾವಿರಕ್ಕೂ ಹೆಚ್ಚು
ರ್ಯಕರ್ತರು ಬೈಕ್‌ಗಳಲ್ಲಿ
ಡೆಸಿ ಸೆ.7 ರಂದು ಮಂಗ
ಲ್ಲಿ ಡಿಸಿ ಕಚೇರಿ ಎದುರು
ಪ್ರತಿಭಟನೆ ನಡೆಸಲಾಗು
ರಾಜ್ಯದಲ್ಲಿ ಕಳೆದ ಎರಡು
ಅವಧಿ ಯಲ್ಲಿ 12 ಕ್ಕೂ
ಹಿಂದೂ ಕಾರ್ಯಕರ್ತರ
ಾಗಿದೆ. ಈ ಹತ್ಯೆಯಲ್ಲಿ
ದೇಶ ದ್ರೋಹಿ ಸಂಘಟನೆ
ರ್ಯಕರ್ತರು ಭಾಗಿಯಾಗಿ
ಈ ಎಲ್ಲಾ ಹತ್ಯೆಗಳ ತನಿಖೆ
ತಪ್ಪಿತಸ್ಥರ ವಿರುದ್ಧ ಕ್ರಮ
ಲ್ಲಿವಲ್ಲಿ ರಾಜ್ಯ ಸರ್ಕಾರ
ರ್ಣ ವಿಫಲವಾಗಿದೆ.

ಅಲ್ಲದೇ ಈ ಸಂಘಟನೆಗಳ ಕಾರ್ಯಕರ್ತರ ಮೇಲಿನ 306 ಕೇಸ್‌ಗಳನ್ನು ವಾಪಾಸ್ ಪಡೆಯುವ ಮೂಲಕ ದೇಶದ್ರೋಹಿ ಸಂಘಟನೆಗಳನ್ನು ಸರ್ಕಾರವೇ ಪೋಷಿಸುತ್ತಿದ್ದು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದರು.

ಬೆಂಗಳೂರಿನಲ್ಲಿ ಮಾಜಿಸಚಿವ ಹಾಗೂ ಶಾಸಕ ಆರ್.ಅಶೋಕ್ ಬೈಕ್ ರ್ಯಾಲಿಗೆ ಚಾಲನೆ ನೀಡಲಿದ್ದಾರೆ. ಸಮಾಜದಲ್ಲಿ ಶಾಂತಿಯನ್ನು ಕದಡುವ ಮೂಲಕ ದೇಶದ್ರೋಹಿ ಕೆಲಸ ಮಾಡುತ್ತಿರುವ ಪಿ.ಎಫ್.ಐ., ಕೆ.ಎಫ್.ಡಿ. ಮತ್ತು ಎಸ್.ಡಿ.ಪಿ.ಐ. ಸಂಘಟನೆಗಳನ್ನು ರಾಜ್ಯದಲ್ಲಿ ನಿಷೇಧಿಸಬೇಕು, ರಾಜ್ಯದಲ್ಲಿ ನಡೆದ ಹಿಂದೂ ಕಾರ್ಯಕರ್ತರ ಹತ್ಯೆ ಹಾಗೂ ಹಲ್ಲೆ ಪ್ರಕರಣಗಳನ್ನು ಸಿಬಿಐಗೆ ಹಸ್ತಾಂತರಿಸಬೇಕು ಹಾಗೂ ಸಮಾಜಘಾತುಕ ಸಂಘಟನೆಗಳಿಗೆ ಮತ್ತು ಕೋಮು ಹಿಂಸೆಗೆ ಕುಮ್ಮಕ್ಕು ನೀಡುತ್ತಿರುವ ಅರಣ್ಯ ಸಚಿವ ರಮಾನಾಥ ರೈ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕೆಂದು ಇದೆ ವೇಳೆ ಆಗ್ರಹಿಸುವುದಾಗಿ ಹೇಳಿದರು. ನಮ್ಮ ಮನವಿಗೆ ಸ್ಪಂದಿಸದಿದ್ದರೇ ಮುಂದಿನ ದಿನಗಳಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಯುವಮೋರ್ಚಾದ ಜಿಲ್ಲಾಧ್ಯಕ್ಷ ಹೆಚ್.ಎನ್. ನಾಗೇಶ್, ಪ್ರಧಾನ ಕಾರ್ಯದರ್ಶಿ ಹರ್ಷಿತ್, ಮಹೇಶ್, ರಘು, ಲೋಕೇಶ್ ಇತರರು ಉಪಸ್ಥಿತರಿದ್ದರು.

ಕೆರೆಗಳ ಪುನಶ್ಚೇತನಕ್ಕೆ ಹಿರಿಯರ ಆಗ್ರಹ

ಹಾಸನ:ಹಾಸನ ನಗರಕ್ಕೆ ಹೊಂದಿಕೊಂಡಿರುವ ಕೆರೆಗಳಿಗೆ ಶೀಘ್ರವೇ ನೀರು ತುಂಬಿಸುವಂತೆ ಹಿರಿಯ ನಾಗರಿಕ ವೇದಿಕೆಯ ಅಧ್ಯಕ್ಷ ಸಿ.ಎಸ್. ಕೃಷ್ಣಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ನಗರದದ ಉದ್ಭವ ಗಣಪತಿ ದೇವಾಲಯದ ಆವರಣದಲ್ಲಿ ನಡೆದ ಹಿರಿಯ ನಾಗರೀಕ ವೇದಿಕೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ನಗಕ್ಕೆ ಹೊಂದಿ ಕೊಂಡಿರುವ ಸತ್ಯಮಂಗಲ, ಚನ್ನಪಟ್ಟಣ ಕೆರೆ ಸೇರಿದಂತೆ ಇನ್ನುಳಿದ ಕೆರೆಗಳನ್ನು ಕೂಡಲೇ ಪುನಶ್ಚೇತನಗೊಳಿಸಿ ನೀರು ತುಂಬಿಸಬೇಕು ಎಂದು ಆಗ್ರಹಿಸಿದರು.

ಈಗಾಗಲೇ ಜಿಲ್ಲೆಯ ಹಂದಿನ ಕೆರೆಯ ಮೂಲಕ ನಗರದ ನಗರದ ಸತ್ಯ ಮಂಗಲ ಮತ್ತಿತರರ ಕೆರೆಗಳಿಗೆ ಹರಿಸಿದರೆ ನಗರದಲ್ಲಿನ ಒಂದಿಷ್ಟು ನೀರಿನ ಸಮಸ್ಯೆ ಬಗೆಹರಿಯಲಿದೆ ಎಂದು ಸಲಹೆ ನೀಡಿದರು.

ಬಿ.ಕೆ.ಮಂಜುನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನೀರಿನ ಸಮಸ್ಯೆ ಉದ್ಭವವಾಗುತ್ತಿದ್ದು, ಜನರಲ್ಲಿ ಪರಿಸರ ಜಾಗೃತಿ ಉಂಟಾಗುತ್ತಿರುವುದು ಒಳ್ಳೆಯ ಬೆಳೆವಣಿಗೆಯಾಗಿದೆ ಎಂದ ಅವರು, ಕೆರೆಗಳ ಮೂಲಕ ನೀರಿನ ಸೆಲೆಯನ್ನು ಹೆಚ್ಚಿಸಬಹುದು. ಹಾಗಾಗಿ ಕೆರೆಗಳ ಉಳಿವು ಹಾಗೂ ನೀರಿನ ಸದ್ಬಳಕೆ ಅತ್ಯಂತ ಅವಶ್ಯವಾಗಿದೆ ಎಂದರು.

ಹೋರಾಟಗಾರ ಬಾಳ್ಳು ಗೋಪಾಲ್ ಮಾತನಾಡಿ, ಹೋರಾಟ ದಿಂದಲೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ಯಾವುದೇ ಹೋರಾಟಗಳು ವ್ಯರ್ಥವಾಗುವುದಿಲ್ಲ. ಕೆರೆಗಳಿಗೆ ನೀರು ತುಂಬಿಸಲು ಹಾಗೂ ಪರಿಸರ ಸಂರಕ್ಷಿಸಲು ಕೇವಲ ಆಡಳಿತ ವ್ಯವಸ್ಥೆ ಹಾಗೂ ಸರ್ಕಾರವನ್ನು ಕಾಯದೆ ಎಲ್ಲರೂ ಜಾಗೃತರಾಗಿ ಪರಿಸರ ಹಾಗೂ ನೀರು ಉಳಿವಿಗೆ ಮುಂದಾಗಬೇಕು ಎಂದು ತಿಳಿಸಿದರು.

ಸತ್ಯಮಂಗಲ ಗ್ರಾಪಂ ಸದಸ್ಯ ಕೆ.ಹೆಚ್.ಪರಮೇಶ್ ಮಾತನಾಡಿ, ನಗರದ ವಿದ್ಯಾನಗರದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಸಮಸ್ಯೆಯ ತುರ್ತು ಪರಿಹಾರಕ್ಕೆ ಮಾರ್ಗವಿದೆ. ಜಯ ನಗರದಲ್ಲಿರುವ ಓವರ್ ನೀರಿನ ಟ್ಯಾಂಕ್ ಮೂಲಕ ಸತ್ಯಮಂಗಲ ಗ್ರಾಪಂ ವ್ಯಾಪ್ತಿಯ ವಿದ್ಯಾನಗರ, ವಿವೇಕಾನಗರ ಭಾಗಗಳಿಗೆ ವಾರಕ್ಕೆ ಮೂರು ದಿನ ನೀರು ಪೂರೈಸಲು ಅನುವು ಮಾಡಿ ಕೊಡಬೇಕು. ಸತ್ಯ ಮಂಗಲ ಗ್ರಾಪಂನ ಸದಸ್ಯರುಗಳು ಶಾಸಕರಾದ ಹೆಚ್.ಎಸ್. ಪ್ರಕಾಶ್, ನಗರಸಭೆ ಅಧ್ಯಕ್ಷರಾದ ಡಾ. ಹೆಚ್.ಎಸ್ .ಅನಿಲ್ ಕುಮಾರ್ ಅವ'ರಲ್ಲಿ ಸಭೆಯ ಮೂಲಕ ಮನವಿ ಮಾಡಿ ಕೊಂಡರು.

ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ. ವೀರಭದ್ರಪ್ಪ, ಜಯಲಕ್ಷ್ಮೀ ನಾರಾಯಗೌಡ, ಮತ್ತಿತರ ಹಿರಿಯ ಮುಖಂಡರು ಸಭೆಯಲ್ಲಿ ಭಾಗವಹಿಸಿ ಕೆರೆಗಳಿಗೆ ಕೂಡಲೇ ನೀರು ತುಂಬಿಸಬೇಕು.ಇಲ್ಲವಾದರೆ ಮುಂದಿನ ದಿನಗಳಲ್ಲಿ ಹೋರಾಟ ವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಸಭೆಗೆ ಬಿಗ್‌ಬಾಸ್ ವಿಜೇತ ಪ್ರಥಮ್ ಆಗಮಿಸಿ ಕೆರೆಗಳ ಉಳಿವಿಗಾಗಿ ಹಿರಿಯ ನಾಗರಿಕರು ಹಮ್ಮಿಕೊಂಡಿರುವ ಹೋರಾಟಕ್ಕೆ ನಾವು ಕೂಡ ಹೆಚ್ಚಿನ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು. ಸತ್ಯಮಂಗಳ ಗ್ರಾಪಂ ಅಧ್ಯಕ್ಷರು ಹಾಗೂ ಸದಸ್ಯರು ಭಾಗವಹಿಸಿದ್ದರು.

ಮಟ್ಕಾ:

ಹಾಸನಮಟ
ವ್ಯಕ್ತಿಯನ್ನು ಬಂ
ಸುಮಾರು 1,12
ವಶಪಡಿಸಿ ಕೊಂ
ವರದಿ ಯಾಗಿದೆ.
ಚಿಕ್ಕನಾಳು ಆಟ
ಹತ್ತಿರ ಮಟ್ಕಾ ಜ
ಎಂ1ಬ ಮ
ಪೆನ್‌ಷನ್ ಮೊ
ಎಎಸ್‌ಐ ಚಿ
ಗಳೊಂದಿಗೆ ದಾ
ಚೀಟಿ ಬರೆಯುತ್ತಿ
ಮುತ್ತುಸ್ವಾಮಿ,
ಎಂಬುವನ್ನು ಬಂ
ಮೊಹಲ್ಲಾ ಠಾಣೆ
ದಾಖಲಿಸಿ ಕ್ರಮ ಕೈ

[redacted]

ಕ್ರೀದ್ ಆಚರಣೆ: ಸಾಮೂಹಿಕ ಪ್ರಾರ್ಥನೆ

ನ:ಸೆ,2–ನಗರದ
ಲೈನ್ ರಸ್ತೆ ಬಳಿ ಇರುವ
ಮೈದಾನದಲ್ಲಿ ಬಕ್ರೀದ್
ಣೆಯ ಪ್ರಯುಕ್ತ ಬೆಳಿಗ್ಗೆ
ಬಾಂಧವರು ಸಾಮೂಹಿಕ
ನೆ ಸಲ್ಲಿಸಿದರು.ನಗರಸಭೆ
ಹೆಚ್.ಎಸ್. ಅನೀಲ್
ರ್ ಸ್ಥಳಕ್ಕೆ ಆಗಮಿಸಿ
ಬಾಂಧವರಿಗೆ ಶುಭಾಶಯ
ದರು.
ರಸಭೆ ಸದಸ್ಯ ಸಮೀರ್
ನಾಡಿ, ತ್ಯಾಗ ಹಾಗೂ
ನದ ಸಂಕೇತವಾಗಿರುವ
್ ಆಚರಣೆಯನ್ನು ಎಲ್ಲಾ
ರು ಶ್ರದ್ಧೆ ಭಕ್ತಿಯಿಂದ

ಆಚರಿಸುತ್ತಾರೆ. ಬಿಹಾರ ಮತ್ತು ಅಸ್ಸಾಂನ ಸಂತ್ರಸ್ತರಿಗೆ ಪರಿಹಾರ ನಿಧಿ ನೀಡುವ ನಿಟ್ಟಿನಲ್ಲಿ ಇಂದು ನಡೆದ ಪ್ರಾರ್ಥನೆ ಸಮಯದಲ್ಲಿ ಮುಸ್ಲಿಂರಿಂದ ದೇಣಿಗೆ ಸಂಗ್ರಹಿಸಿ ಜಿಲ್ಲಾಧಿಕಾರಿ ಮೂಲಕ ಪ್ರಧಾನಿಗೆ ರವಾನಿಸಲಾಗುವುದು. ಅಲ್ಲಿಂದ ನೇರವಾಗಿ ಸಂತ್ರಸ್ತರಿಗೆ ಪರಿಹಾರ ತಲುಪುವಂತೆ ಮಾಡುವುದಾಗಿ ಹೇಳಿದರು. ಸಾವಿರಾರು ಮುಸ್ಲಿಂ ಬಾಂಧವರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ

ಸಕಲೇಶಪುರ: ಪಟ್ಟಣದ ಈದ್ಗಾ ಮೈದಾನದಲ್ಲಿ ಬಕ್ರೀದ್ ಆಚರಣೆಯ ಅಂಗವಾಗಿ ಬೆಳಿಗ್ಗೆ ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು.

ಶಾಸಕ ಎಚ್ ಕೆ ಕುಮಾರಸ್ವಾಮಿ. ಜೆ ಡಿ ಎಸ್ ಮುಖಂಡರಾದ ಸಾ ಬ ಬಾಸ್ಕರ್, ಸಚಿನ್ ಪ್ರಸಾದ್‌ಆಗಮಿಸಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು.

ಜಾಮೀಯ ಮಸೀದಿ ಅಧ್ಯಕ್ಷ ನಜೀಬ್‌ಅಕ್ರಂ ಮಾತನಾಡಿ, ಮನುಷ್ಯತ್ಯಾಗದಿಂದ ಮಾತ್ರ ಮೋಕ್ಷ ಪಡೆಯಲು ಸಾಧ್ಯ. ತ್ಯಾಗದ ಪರಿಕ್ಷೆಯಲ್ಲಿ ಉತ್ತೀರ್ಣರಾದವರು ಮಾತ್ರಚರಿತ್ರೆಯಲ್ಲಿ ಉಳಿಯುತ್ತಾರೆ. ತಾವು ಹೆಚ್ಚು ಪ್ರೀತಿಸುವದನ್ನೆತ್ಯಾಗಮಾಡುವ ಸಂದರ್ಭಗಳು ಜೀವನದಲ್ಲಿ ಎದುರಾಗುತ್ತವೆ. ಈ ಸಮಯವನ್ನುದಾಟಿದವರು ಮಾತ್ರದೇವರಿಗೆ ಅಥವಾ ವಿಶ್ವಾಸವಿರಿಸುವವರ ವಿಶ್ವಾಸಕ್ಕೆ ಹೆಚ್ಚು ಹತ್ತಿರವಾಗುತ್ತಾರೆ ಎಂದರು.

ಇದೇ ಸಂದರ್ಭದಲ್ಲಿ ಮುಸ್ಲಿಂ ಮುಖಂಡರಾದ ಶಬ್ಬೀರ್‌ಜಾನ್, ಮಲ್ನಾಡ್ ಮೆಹಬೂಬ್, ಮುಫೀಜ್, ಹಿರಿಯರು ಮತ್ತು ಕಿರಿಯರು ಎಲ್ಲಾ ಒಟ್ಟಾಗಿ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.